**ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003**

# ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–4/2015–16 ದಿನಾಂಕ: 28.03.2016**

## 460 ಉಪ ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ

ಈ ಕಛೇರಿಯ ದಿನಾಂಕ: 16.08.2016 ರ ಪ್ರಕಟಣೆಯನ್ನು ಮುಂದುವರೆಸುತ್ತಾ, 1:20 (ಹುದ್ದೆ:ಅಭ್ಯರ್ಥಿ) ಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿ, ಈ ಪಟ್ಟಿಯ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ, ಲಿಖಿತ ರೂಪದಲ್ಲಿ ದಿನಾಂಕ: 31.08.2016 ರೊಳಗೆ ಸಲ್ಲಿಸಬಹುದಾಗಿ ತಿಳಿಸಲಾಗಿತ್ತು. ಒಟ್ಟು 46 ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿದೆ. ಪ್ರತಿಯೊಂದು ಆಕ್ಷೇಪಣೆಯನ್ನು ಕೂಲಂಕುಶವಾಗಿ ಪರಿಶೀಲಿಸಿ, ನಿಯಮಾನುಸಾರ ವಿಲೇ ಮಾಡಲಾಗಿದೆ. ಈ ಬಗ್ಗೆ ಮಾಹಿತಿಯನ್ನು ದಿನಾಂಕ: 04.10.2016 ರ ಪ್ರಕಟಣೆಯಲ್ಲಿ ವಿವರವಾಗಿ ತಿಳಿಸಲಾಗಿದೆ.

ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–4/2015–16 ದಿನಾಂಕ: 28.03.2016 ರ ಷರತ್ತಿನ ಸಂಖ್ಯೆ (4) ರಲ್ಲಿ **"**ಉಪ ವಲಯ ಅರಣ್ಯಾಧಿಕಾರಿ ಹುದ್ದೆಗೆ ವಿದ್ಯಾರ್ಹತೆಯು ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಲ್ಲಿ ಬಿ.ಎಸ್ಸಿ. ಅರಣ್ಯ ಶಾಸ್ತ್ರ (Forestry) ವಿಷಯದಲ್ಲಿ ಅಥವಾ ಬಿ.ಎಸ್ಸಿ. ಯಲ್ಲಿ ಪದವೀದರರಾಗಿರಬೇಕು. ಬಿ.ಎಸ್ಸಿ. ಪದವೀಧರರು ಭೌತಶಾಸ್ತ್ರ (Physics), ರಸಾಯನಶಾಸ್ತ್ರ (Chemistry), ಗಣಿತಶಾಸ್ತ್ರ (Mathematics), ಸಸ್ಯಶಾಸ್ತ್ರ (Botany), ಪ್ರಾಣಿಶಾಸ್ತ್ರ (Zoology), ಭೂಗರ್ಭಶಾಸ್ತ್ರ (Geology), Micro Biology, Bio-Technology, Bio-Chemistry ಈ ಐಚ್ಛಿಕ ಪಠ್ಯಕ್ರಮಗಳಲ್ಲಿ ಯಾವುದಾದರೂ ಎರಡು ಅಥವಾ ಹೆಚ್ಚಿನ ಪಠ್ಯಕ್ರಮಗಳನ್ನು **ಎಲ್ಲಾ ಸೆಮಿಸ್ಟರುಗಳಲ್ಲಿ** ಅಭ್ಯಾಸ ಮಾಡಿರಬೇಕು**"** ಎಂದಿರುತ್ತದೆ.

ಆದ್ಯಾಗ್ಯೂ, ಹಲವಾರು ಅಭ್ಯರ್ಥಿಗಳು ಬಿ.ಎಸ್ಸಿ. (Agriculture), ಬಿ.ಎಸ್ಸಿ. (Horticulture), ಬಿ.ಎಸ್ಸಿ. (Fisheries) ಹಾಗೂ ಬಿ.ಎಸ್ಸಿ. (Nursing) ಇತ್ಯಾದಿ ವಿದ್ಯಾರ್ಹತೆ ಪಡೆದ ಅಭ್ಯರ್ಥಿಗಳು ಉಪ ವಲಯ ಅರಣ್ಯಾಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ. ಇವರುಗಳು ನಿಗಧಿತ ವಿದ್ಯಾರ್ಹತೆಯನ್ನು ಹೊಂದದೆ ಇರುವ ಕಾರಣ, ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. ಈ ಹಿಂದಿನ ನೇಮಕಾತಿ ಪ್ರಕ್ರಿಯೆಯಲ್ಲಿಯೂ ಈ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿದ್ದು, ಅವರನ್ನೂ ಸಹ ಈ ಕಛೇರಿಯ ದಿನಾಂಕ: 10.03.2015 ರ ಪ್ರಕಟಣೆಯಲ್ಲಿ ತಿಳಿಸಿರುವಂತೆ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗಿರುತ್ತದೆ ಎಂಬ ಅಂಶವನ್ನು ಅಭ್ಯರ್ಥಿಗಳಿಗೆ ತಿಳಿಸಲಾಗಿದೆ.

1:20 (ಹುದ್ದೆ:ಅಭ್ಯರ್ಥಿ) ಗಳ ಅಂತಿಮ ಪಟ್ಟಿಯನ್ನು ಈ ಪ್ರಕಟಣೆಯೊಂದಿಗೆ ಪ್ರಕಟಿಸಲಾಗಿದೆ. ಸದರಿ ಅಂತಿಮ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ದೈಹಿಕ ತಾಳ್ವಿಕೆ ಪರೀಕ್ಷೆ (ಕಾಲ್ನಡಿಗೆ) ಹಾಜರಾಗಲು ಅರ್ಹರಾಗಿರುತ್ತಾರೆ. **ದೈಹಿಕ ತಾಳ್ವಿಕೆ ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳ ಪ್ರವೇಶ ಪತ್ರವನ್ನು ದಿನಾಂಕ: 08.10.2016 ರಂದು ಇಲಾಖಾ ವೆಬ್‌ಸೈಟ್ https://kfdrecruitment.in ನಿಂದ ಪಡೆದುಕೊಳ್ಳುವುದು.**

ದಿನಾಂಕ: 04–10–2016
ಬೆಂಗಳೂರು

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)